ಇಂತಹ ಪ್ರಕರಣಗಳನ್ನು ಗಮನ ಬೇರೆಡೆ ಸೆಳೆದು ಮಾಡುವ ಅಪರಾಧಗಳೆನ್ನುತ್ತಾರೆ. ಸಾಮಾನ್ಯವಾಗಿ 'ಅಟೆನ್ಷನ್ ಡೈವರ್ಷನ್' ಕೇಸುಗಳೆಂದು ಕರೆಯಲಾಗುತ್ತದೆ. ಇವು ಕಳ್ಳತನ ಅನ್ನಿಸಿಕೊಂಡರೂ ಪೂರ್ತಿ ಕಳ್ಳತನಗಳಲ್ಲ. ಆಮಿಷಗಳನ್ನು ತೋರಿಸಿ ಗಮನ ಸೆಳೆಯುವುದರಿಂದ ವಂಚನೆ ಅಂತಲೂ ಕರೆಯಬಹುದು. ಒಂದು ರೀತಿಯ ಕಲೆಗಾರಿಕೆ ಕಳ್ಳತನ. ಇಲ್ಲಿ ಕ್ರಿಯೇಟಿವಿಟಿ ತೋರಲು ಸಾಕಷ್ಟು ಅವಕಾಶಗಳಿವೆ. ಅದಕ್ಕೆ ತಕ್ಕ ರಿಹರ್ಸಲುಗಳು, ಮೀಟಿಂಗುಗಳೂ ನಡೆಯುತ್ತವೆ. ಅದಕ್ಕೆ ಮೊದಲೇ ಹೇಳಿಬಿಟ್ಟಿದ್ದೇನೆ, ಇಲ್ಲಿಯೂ ರಿಸರ್ಚುಗಳಾಗುತ್ತವೆಂದು. ಎಲ್ಲ ರಿಸರ್ಚುಗಳ ಅಂತಿಮ ಉದ್ದೇಶ ಒಂದೇ, ಮಿಕವನ್ನು ಹೇಗೆ ಬಲೆಗೆ ಕೆಡವಬೇಕೆಂದು.

ನನ್ನ ಸ್ನೇಹಿತನ ದಾಯಾದಿ ಕಿರಣನದ್ದು ಬೇರೆ ತರಹದ ಅನುಭವ. ಹುಬ್ಬಳ್ಳಿ ಕಡೆಯ ಹುಡುಗ. ಸಾಲ ಮಾಡಿ ನಗರದ ಬಡಾವಣೆಯೊಂದರಲ್ಲಿ ಇತ್ತೀಚೆಗಷ್ಟೆ ಮನೆಯೊಂದನ್ನು ಕೊಂಡಿದ್ದಾನೆ. ಅಂತಹ ಕಿರಣನಿಗೊಂದು ಒಳ್ಳೆ ಅಭ್ಯಾಸವಿದೆ. ಪ್ರತಿದಿನ ಆಫೀಸಿನಿಂದ ಮನೆಗೆ ಬರುವಾಗ ಹೆಂಡತಿಗೆ ಫೋನು ಹಚ್ಚಿ "ಬಾಯೀ... ಮನೀಗೆ ಏನಾದ್ರೂ ಬೇಕಿತ್ತಾ?..'' ಅಂತ ಒಮ್ಮೆ ಕೇಳುತ್ತಾನೆ. ಆವತ್ತು ಮಧ್ಯದಾರಿವರೆಗೂ ಬಂದವನಿಗೆ ಅರೆ... ಹೆಂಡತಿಗೆ ಈ ದಿನ ಕುಶಲ ವಿಚಾರಿಸಿಲ್ಲವಲ್ಲ ಎಂಬ ಸಂಗತಿ ನೆನಪಿಗೆ ಬಂದಿದೆ. ಪಕ್ಕಕ್ಕೆ ವಾಹನವನ್ನು ತರುಬಿ ಪತ್ನಿಗೆ ಫೋನು ಹಚ್ಚಿದ್ದಾನೆ. ಒಂದೆರೆಡು ನಿಮಿಷಗಳಾಗಿರಬಹುದು ಅಷ್ಟೆ. ಪಕ್ಕದಲ್ಲೇ ದ್ವಿಚಕ್ರ ವಾಹನ ಸವಾರನೊಬ್ಬ ಇವರು ಚಾಲನೆ ಮಾಡುತ್ತಿದ್ದ ಸೈಡಿಗೆ ಬಂದು ಸ್ಕೂಟರು ನಿಲ್ಲಿಸಿಕೊಂಡಿದ್ದಾನೆ. ನೋಡವುದಕ್ಕೆ ದಡೂತಿ ಅಸಾಮಿಯೇ. ಗಾಡಿಯನ್ನು ಹೇಗೆ ನಿಲ್ಲಿಸಿದ್ದಾನೆಂದರೆ ಡೋರು ತೆಗೆದು ಇಳಿಯಲೂ ಸಾಧ್ಯವಿಲ್ಲ ಅನ್ನುವ ರೀತಿ. ಕುಳಿತಲ್ಲಿಂದಲೇ "ಅಲ್ಲಾರೀ ಸ್ವಾಮೀ... ಯಾರ ಧ್ಯಾನ ಮಾಡ್ಕಂಡು ಬತ್ತಾ ಇದೀರಿ... ತಾವು? ಅರ್ಧ ಕಿಲೋಮೀಟರು ಹಿಂದೆ ಬೈಕಿಗೆ ಗುದ್ದಿಸ್ಕೊಂಡು ಸೀದಾ ನಿಲ್ಲುಸ್ದೆ ಬಂದುಬಿಡೋದಾ?... ಪಾಪ, ಅವನ ಮೈಕೈ ಎಲ್ಲಾ ತರಚ್ಕೊಂಡು ರಕ್ತ ಸುರೀತಾ ಅದೆ... ಕೆಳಗಿಳಿದು ನೋಡ್ಬೇಕು ಅನ್ನೋ ಕನಿಷ್ಠ ಸೌಜನ್ಯನೂ ಇಲ್ವಲ್ರೀ... ಅವನ್ನ ಈಗ ಆಸ್ಪತ್ರೆಗೆ ಯಾವನ್ ಕರ್ಕಂಡು ವೋಯ್ತಾನೆ?...'' ಅಂತ ವರಾತ ತೆಗೆದಿದ್ದಾನೆ.

ಕಿರಣ ಕುಳಿತಲ್ಲೇ ಬೆವರಿದ್ದಾನೆ. ಒಂದು ಕ್ಷಣ ಅವನ ಡ್ರೈವಿಂಗ್ ಮೇಲೆಯೇ ಅನುಮಾನ ಮೂಡಿದೆ. ನಾನಂತೂ ಬರುವಾಗ ಯಾವ ಗಾಡಿಗೂ ಗುದ್ದಿಲ್ಲ. ಅಸಲು ತನ್ನ ಸ್ಪೀಡೇ ಮೂವತ್ತು ಇಲ್ಲಾ ನಲ್ವತ್ತು. ಈ ಸಿಟೀಲಿ ಇನ್ಯಾವ ಮಹಾ ವೇಗದಲ್ಲಿ ಓಡಿಸಲಾದೀತು?... ಅದರಲ್ಲೂ ಗಾಡಿಗೆ ಗುದ್ದಿದ್ದರೆ ತನ್ನ ಕಾರಿನ ಮೂತಿಯೂ ಮೊಂಡಾಗಬೇಕಿತ್ತಲ್ವೇ?... ಅದನ್ನೇ ಅವನಿಗೂ ಹೇಳಿದ್ದಾನೆ. ''ಗುರೂ... ನನ್ಗೆ ಅಂಥ ಯಾವ ಅರ್ಜೆಂಟೂ ಇಲ್ಲ... ಗುದ್ದಿಸಿ ಓಡಿಹೋಗೋ ಜಾಯಮಾನವೂ ನನ್ನದಲ್ಲ... ಬಹುಶಃ ನಿಮ್ಗೆ ಕನ್‌ಫ್ಯೂಸು ಆಗಿರಬೇಕು...'' ಅನ್ನುತ್ತಿದ್ದಂತೆ ಎದುರಿನವನು ಒಮ್ಮೆಲೇ ಏಕವಚನ ಪ್ರಯೋಗಕ್ಕಿಳಿದಿದ್ದಾನೆ. "ನೋಡಯ್ಯಾ... ಹೆಚ್ಗೆ ಮಾತು ಬ್ಯಾಡಾ.. ಅಲ್ಲಿ ಜನ ಸೇರಿ ರೊಚ್ಚಿಗೆದ್ದಿದ್ದಾರೆ, ಯಾವ ಕ್ಷಣದಲ್ಲಿ ಬೇಕಾದ್ರೂ ಇಲ್ಗೆ ಬರ್ಬೌದು... ಧರ್ಮದೇಟು ತಿನ್ಬೇಕಂತ ನಿನ್ನ ಹಣೇಲಿ ಬರೆದಿದ್ರೆ ಯಾರೇನು ಮಾಡೋಕಾಗಲ್ಲ... ಮೊದಲು ಏಟು ಬಿದ್ದವ್ನ ಆಸ್ಪತ್ರೆಗೆ ಕರ್ಕೊಂಡು ಹೋಗ್ಬೇಕು, ಟ್ರೀಟ್ಮೆಂಟು ಕೊಡಿಸ್ಬೇಕು... ಹೆಚ್ಚು ಕಡಿಮೆ ಲಕ್ಷ ರುಪಾಯಿ ಆಗ್ತದೆ... ಯಾರು ಕಟ್ತೋನು ಆ ದುಡ್ಡು? ನೀನು ನೋಡುದ್ರೆ ತಪ್ಪಿಸ್ಕೊಂಡು ಹೋಗಾಕೆ ನೋಡ್ತಾ ಇದ್ದೀಯಾ... ನೀನೆ ಸೆಟ್ಲುಮೆಂಟು ಮಾಡ್ಕತೀಯಾ?... ಅಥವಾ ಅಲ್ಲಿ ಸೇರಿರೋ ನಮ್ ಜನಗಳ್ನೆಲ್ಲಾ ಇಲ್ಗೇ ಕರೆಸ್ಬೇಕಾ?" ಅಂತ